# ನೂರಾರು ಹಕ್ಕಿಗಳಿಗೆ ಮಡಿಲಾಗುವ ಗೋಣಿ



**ಪಶ್ಚಿಮ ಘಟ್ಟಗಳು ಅನೇಕ ಬಗೆಯ ವಿಶಿಷ್ಟ ಮರಗಳ ತವರು. ಘಟ್ಟದ ವಿಶೇಷ ವೃಕ್ಷಗಳಲ್ಲೊಂದು ಗೋಣಿ. ಬನ್ನಿ, ಆದರ ವೃತ್ತಾಂತ ತಿಳಿಯೋಣ.**

■ ವಿನು ಗಂಗೆ

ಗೋಣಿ ಮರ ಆಲದ ಜಾತಿಯ ಮರ. ವಿಶಾಲವಾಗಿ ಬೆಳೆಯುವ ಸಾಮರ್ಥ್ಯವುಳ್ಳ ಮರ. ಬಿಳಲುಗಳು ಇರುವುದಾದರೂ ಆಲದ ಮರದಷ್ಟಲ್ಲ. ಬಹುತೇಕ ಆಲದ ಮರವನ್ನೇ ಹೋಲುವ, ನೂರಾರು ಹಕ್ಕಿಗಳಿಗೆ ಆಶ್ರಯ ನೀಡುವ ಮರ. ಸಾಮಾನ್ಯವಾಗಿ ಎಲ್ಲ **Ficus** ಜಾತಿಯ ಮರಗಳನ್ನು ನಮ್ಮ ಸಂಸ್ಕೃತಿಯಲ್ಲಿ ಪೂಜಾರ್ಹ ಎಂದು ಪರಿಗಣಿಸಲಾಗುತ್ತದೆ. ಅತ್ತಿ, ಅರಳಿ (ಹೆಚ್ಚಿನ ಆಮ್ಲಜನಕ), ಆಲ, ಬಸರಿ, ಗೋಣಿ ಇವೆಲ್ಲವೂ ಪೂಜಾರ್ಹ ಮರಗಳೇ. ಈ ಮರಗಳಿಂದ ಬೇಸಿಗೆಯಲ್ಲಿ ಸಾಕಷ್ಟು ಹಣ್ಣು ಹಂಪಲು ಪಕ್ಷಿಗಳಿಗೆ ದೊರೆಯುತ್ತದೆ. ಮಳೆಗಾಲದಲ್ಲಿ ಕೀಟಗಳೂ ಭರ್ತಿ ಆಹಾರ. ಆದರೆ ಚಳಿಗಾಲದಲ್ಲಿ ಹಣ್ಣು ಕೊಟ್ಟು ಜೀವಕೊಂಡಿಯನ್ನು ಕಾಪಾಡುವುದು ಈ ಪ್ರಭೇದಗಳೇ. ಅಲ್ಲದೆ ಇದರ ಹಣ್ಣುಗಳಲ್ಲಿ ಇರುವ ಕ್ಯಾಲ್ಸಿಯಂ ಅಂಶ ಹಕ್ಕಿಗಳ ಮೊಟ್ಟೆಯ ಕವಚವನ್ನು ಶಕ್ತವಾಗಿಸುತ್ತದೆ. ಈ ಎಲ್ಲ ಅಂಶಗಳು ನಮ್ಮ ಹಿರಿಯರ ಗಮನಸೆಳೆದ ಕಾರಣದಿಂದಾಗಿ, ಈ ಮರಗಳಿಗೆ ಪೂಜೆಯ ಭಾಗ್ಯ ದೊರೆತಿರಬೇಕು.

ಗೋಣಿ ಮರ ನನ್ನ ಗಮನ ಸೆಳೆದದ್ದು ಮೂರು ವರ್ಷಗಳ ಹಿಂದೆ, ಒಂದು ದಿನ ನಮ್ಮ ಅತ್ತೆಯವರ ಮನೆಯಲ್ಲಿ ತಿಂದ ಉಪ್ಪಿನಕಾಯಿಯಿಂದ. ಅದ್ಭುತ ರುಚಿಯ ಆ ಉಪ್ಪಿನಕಾಯಿ ತಿಂದ ನನ್ನ ಮಗಳು ಪುನಃ ಬೆಂಗಳೂರಿಗೆ ಬಂದಾಗ, ತೊದಲು ಮಾತಲ್ಲಿ ನನಗೆ ಗೋಣಿಕಾಯಿ ಉಪ್ಪಿನಕಾಯಿ ಬೇಕೆಂದು ಹಟ ಹಿಡಿದಳು. ಆಗ ನನಗನಿಸಿದ್ದು, ಇಷ್ಟು ರುಚಿಯಾದ ಉಪ್ಪಿನಕಾಯಿ ಕೊಡುವ ಮರ ಬೆಳೆಸಬೇಕು ಎಂದು.



ಇದು ಒಂದು ಕೊಂಬೆ ಕಡಿದು ಹಚ್ಚಿದರೆ ಹುಟ್ಟುತ್ತದೆ. ನನಗೆ ಗೊತ್ತಿದ್ದಂತೆ ನಮ್ಮ ಊರಿನ ಪಕ್ಕದ ಊರಲ್ಲಿ ಒಂದು ಗೋಣಿ ಮರವಿದೆ. ದೇವರ ಮರವಾಗಿಸಿರುವುದರಿಂದ ಅದನ್ನು ಹತ್ತಿ ಕಾಯಿ ಕೊಯ್ಯುವುದು ನಿಷಿದ್ಧ. ಕೊಂಬೆ ಮುರಿಯುವುದು ಕೂಡ. ಬಹುಶಃ ದೇವರು ನಾನು ಗೋಣಿಮರದ ಸಂತತಿ ಉಳಿಸಲು ಕೊಂಬೆ ಮುರಿದರೆ ಏನೂ ಮಾಡುತ್ತಿರಲಿಲ್ಲವೇನೋ? ಆದರೆ ಮತ್ತೊಬ್ಬರಿಗೆ ಕೊಂಬೆ ಕಡಿಯುವ ಭಂಡ ಧೈರ್ಯ ತರಬಾರದೆಂದು ಸುಮ್ಮನಾದೆ.

ಗೋಣಿ ಸಸಿ ಬೆಳೆಸುವುದು ಹೇಗೆ? ಅರಣ್ಯ ಇಲಾಖೆಯ ನರ್ಸರಿಗಳಲ್ಲಿ ಇದು ಇರಲಿಲ್ಲ. ಇದು ಹಕ್ಕಿಯ ಹೊಟ್ಟೆಯಿಂದ ಹೊರಬಂದು ಹುಟ್ಟುವ ಬೀಜವಾದ್ದರಿಂದ ಯಾವುದಾದರೂ ಪೊಟರೆಗಳಲ್ಲಿ ಇದೆಯೋ ಎಂದು ನೋಡುವುದಷ್ಟೇ ನನಗೆ ಉಳಿದಿದ್ದ ದಾರಿ.

ಮಲೆನಾಡಿನಲ್ಲಿ ಎಷ್ಟು ಹುಡುಕಿದರೂ ಸಿಗದ ಗೋಣಿ ಸಸಿ ನನಗೆ ಬೆಂಗಳೂರಿನಲ್ಲಿ ಇನ್ನಷ್ಟು ದುರ್ಲಭ ಎನಿಸಿತು. ಆದರೆ ಪ್ರಕೃತಿ ನನ್ನನ್ನು ಹೆಚ್ಚಿಗೆ ಕಾಯಿಸಲಿಲ್ಲ. ಒಂದು ದಿನ ನಮ್ಮ ಬಾಲ್ಕನಿಯ ಮಣ್ಣಿನ ಪಾಕೀಟಲ್ಲಿ ಈ ಗಿಡದ ಸಸಿ ಮೂಡಿತ್ತು. ಸಣ್ಣ ರೋಮಗಳಿರುವ ಎಲೆಗಳನ್ನು ನೋಡಿದ ತಕ್ಷಣ, ಅದು ಗೋಣಿ ಅಂತ ಗುರುತಿಸಲು ತಡವಾಗಲಿಲ್ಲ. ತುಂಬಾ ಖುಷಿಯಿಂದ ಆ ಸಸಿ ನಮ್ಮ ತೋಟದ ರಸ್ತೆ ಬದಿಯಲ್ಲಿ ಹಾಕಿದೆ. ಸ್ವಲ್ಪ ಬೆಳೆದಿದೆ. ಅದು ದೊಡ್ಡದಾದ ಮೇಲೆ ದೇವರ ಮರವಾಗಿಸುವೆ. ಕೆಳಗಡೆಯ ಕಾಯಿಗಳು ನಮ್ಮ ಉಪ್ಪಿನಕಾಯಿಗೆ, ಮೇಲಿನವು ಹಕ್ಕಿಗಳಿಗೆ.

ನಾವು ನಿಸರ್ಗದ ಉತ್ಪನ್ನಗಳನ್ನು ಉಪಯೋಗಿಸುವುದು ಹೇಗೆ, ತಿನ್ನಬಹುದೇ ಎಂದಷ್ಟೇ ಯೋಚಿಸದೇ, ಬೆಳೆಸುವುದು ಹೇಗೆ ಎಂದು ಯೋಚಿಸುವತ್ತ ಮುನ್ನಡೆದರೆ ಮಾತ್ರ ನಮ್ಮ ಮಕ್ಕಳು ನಾವು ಸವಿದ ರುಚಿಯನ್ನು ಸವಿಯಲು ಸಾಧ್ಯ.

ಪ್ರತಿಕ್ರಿಯಿಸಿ: **feedback@sudha.co.in**

